KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT:
NAME OF THE NEWS PAPER:
DATE: 6/6/22

ಪ್ರಧಾನಿಯನ್ನು ಮಾತಲ್ಲಿ ಕಟ್ಟಿಹಾಕುವ ಖರ್ಗೆಗೆ ಮಣೆ | ವರಿಷ್ಠರಿಂದಲೇ ತೀರ್ಮಾನ ಪ್ರಕಟ

# ಪಕ್ಷ ನಿಷ್ಠೆಗಾಗಿ ಅರಸಿ ಬಂದ ಅವಕಾಶ

■ **ದೇವಯ್ಯ ಗುತ್ತೇದಾರ್** ಕಲಬುರಗಿ
devayya.guttedar@timesgroup.com

ರಾಜ್ಯಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವಕಾಶ ನೀಡಿರುವುದು ಪಕ್ಷ ನಿಷ್ಠೆಗೆ 'ಕೈ'ಕಮಾಂಡ್ ನೀಡಿದ ಮನ್ನಣೆಯಾಗಿದೆ.

ಪ್ರಧಾನಿ ಮೋದಿ ವಿರುದ್ಧ ಲೋಕಸಭೆಯಲ್ಲಿ ಮಾತಿನಲ್ಲಿ ಕಟ್ಟಿಹಾಕುವ ಚಾಕಚಕ್ಯತೆ, ಹಿಂದಿ, ಉರ್ದುವಿನಲ್ಲಿ ಲೀಲಾಜಾಲವಾಗಿ ಪ್ರಬುದ್ಧತೆಯಿಂದ ಮಾತನಾಡುವ ಕನ್ನಡಿಗ, ಅದರಲ್ಲೂ ದಕ್ಷಿಣ ಭಾರತದ ಕಾಂಗ್ರೆಸ್ ಪ್ರಮುಖ ನಾಯಕ ಇವರಾಗಿದ್ದಾರೆ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಗೆ ಅತ್ಯಂತ ಆಪ್ತರು. ಕೇಂದ್ರದಲ್ಲಿ ಮೋದಿ ಅವರನ್ನು ರಾಜಕೀಯವಾಗಿ ಎದುರಿಸುವ ಕೊರತೆ ಕೈ ಪಾಳಯದಲ್ಲಿ ಇರುವುದನ್ನು ಮನಗಂಡಿರುವ ಹೈಕಮಾಂಡ್‌ನ ಅಂತಿಮ ಆಯ್ಕೆ ಖರ್ಗೆ ಅವರಾಗಿದ್ದಾರೆ.

1972ರಲ್ಲಿ ಮೊದಲ ಬಾರಿಗೆ ವಿಧಾನಸಭೆಗೆ ಎಂಟ್ರಿಕೊಟ್ಟಿದ್ದ ಖರ್ಗೆ, 10 ಬಾರಿ ವಿಧಾನಸಭೆಗೆ ಮತ್ತು ಎರಡು ಬಾರಿ ಲೋಕಸಭೆಗೆ ನಿರಂತರವಾಗಿ ಆಯ್ಕೆಯಾಗಿದ್ದಾರೆ. 2019ರಲ್ಲಿ ನಡೆದ ಚುನಾವಣೆಯಲ್ಲಿ ಮೊದಲ ಬಾರಿಗೆ ಬಿಜೆಪಿಯ ಡಾ. ಉಮೇಶ್ ಜಾಧವ್ ಎದುರು ಸೋತರು. ರೈಲ್ವೆಯಂಥ ಪ್ರಮುಖ ಖಾತೆ ನಿರ್ವಹಿಸಿ ಸೈ ಎನಿಸಿದ ಖರ್ಗೆಗೆ ಮತ್ತೆ ರಾಜ್ಯಸಭೆಗೆ ಪ್ರವೇಶ ಕೊಡಿಸಲು ವರಿಷ್ಠರು ನಿರ್ಧರಿಸಿದ್ದಾರೆ.




**ಹಿರಿಯ ಮುತ್ಸದ್ದಿ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪಕ್ಷದ ಅಭ್ಯರ್ಥಿಯಾಗಿ ಆಯ್ಕೆ ಮಾಡಿರುವುದಕ್ಕೆ ವರಿಷ್ಠರಿಗೆ ಅಭಿನಂದನೆಗಳು.**
**- ಸಿದ್ದರಾಮಯ್ಯ** ಪ್ರತಿಪಕ್ಷ ನಾಯಕ

**ಅಸಮಾಧಾನ ತೋರಲಿಲ್ಲ:** ಸಹನೆ ಕಳೆದುಕೊಳ್ಳದಿರುವುದು, ವಿಚಲಿತ ಆಗದೇ ಇರುವುದು ಖರ್ಗೆ ಹುಟ್ಟುಗುಣ. ಇವರಿಗೆ ಅನ್ಯಾಯವಾದಾಗ ಬೆಂಬಲಿಗರು ತೀವ್ರ ಹೋರಾಟದಲ್ಲಿ ತೊಡಗಲು ಮುಂದಾಗಿದ್ದರೆ, ಅದನ್ನೂ ಮಾಡಲು ಅವಕಾಶ ಕೊಡದೆ ಪಕ್ಷ ನಿಷ್ಠೆ ತೋರಿದ್ದರು. ಅತಿಯಾದ ಪಕ್ಷನಿಷ್ಠೆಯೇ ಖರ್ಗೆ ಅವರಿಗೆ ಮುಳುವಾಗಿದೆ ಎನ್ನುವವರೂ ಇದ್ದಾರೆ. ಆದರೆ ಈಗ ಸೋತಿದ್ದರೂ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡುವ ಮೂಲಕ ವ್ಯಕ್ತಿ ಕಷ್ಟ ಕಾಲದಲ್ಲಿ ಪಕ್ಷ ಕೈ ಹಿಡಿದಿರುವುದು ನಿಷ್ಠೆಗೆ ಬೆಲೆ ಇದ್ದೇ ಇರುತ್ತದೆ ಎನ್ನುವುದು ಸಾಬೀತಾಗಿದೆ ಎನ್ನುತ್ತಾರೆ ಖರ್ಗೆ ಸಮಕಾಲೀನರು.

ದಲಿತ ಸಿಎಂ ವಿಚಾರ ಬಂದಾಗ ವ್ಯಗ್ರರಾಗಿದ್ದ ಖರ್ಗೆ ''ಜಾತಿಗೆ ಮನ್ನಣೆ ನೀಡಿದರೆ ಕಾರ್ಯಕರ್ತನಾಗಿ ಸಲ್ಲಿಸಿದ ಸೇವೆಗೆ ಅವಮಾನವಾಗುತ್ತದೆ. ಪಕ್ಷದ ಸೇವೆ ಗುರುತಿಸಿ ಸ್ಥಾನ ನೀಡಬೇಕು,'' ಎಂದು ಅವರು ಪ್ರತಿಬಾರಿಯೂ ಪ್ರತಿಪಾದಿಸುತ್ತಿದ್ದ ಉನ್ನತ ವಿಚಾರವಾದಿಯೂ ಹೌದು.

## ಧ್ರುವನಾರಾಯಣ್ ಸ್ಪಷ್ಟನೆ

**ಚಾಮರಾಜನಗರ:** ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯಸಭೆ ಟಿಕೆಟ್ ನೀಡುವಂತೆ ಬೆಂಗಳೂರಿನ ಕುಮಾರಕೃಪ ಅತಿಥಿಗೃಹದಲ್ಲಿ ನಡೆದ ಕಾಂಗ್ರೆಸ್ ಮಾಜಿ ಸಂಸದರ ಸಭೆಯಲ್ಲಿ ತಾವು ಒತ್ತಾಯಿಸಿದ್ದಾಗಿ ಮಾಜಿ ಸಂಸದ ಆರ್. ಧ್ರುವನಾರಾಯಣ್ ಸ್ಪಷ್ಟಪಡಿಸಿದ್ದಾರೆ. ಮುದ್ದಹನುಮೇಗೌಡರಿಗೆ ರಾಜ್ಯಸಭೆ ಟಿಕೆಟ್ ನೀಡಬೇಕೆಂದು ಒತ್ತಾಯಿಸಿರಲಿಲ್ಲ ಎಂದವರು ಸ್ಪಷ್ಟಪಡಿಸಿದ್ದಾರೆ.

**ಖರ್ಗೆ ಆಯ್ಕೆ ಸೂಕ್ತವಾಗಿದೆ. ದೇವೇಗೌಡರಿಗೆ ಬೆಂಬಲ ನೀಡುವ ವಿಚಾರದಲ್ಲಿ ಸೋನಿಯಾ ಗಾಂಧಿ ತೀರ್ಮಾನ ಮಾಡುತ್ತಾರೆ. ಹೈಕಮಾಂಡ್ ಆದೇಶದಂತೆ ಕೆಲಸ ಮಾಡುತ್ತೇವೆ.**
**-ಡಿ.ಕೆ.ಶಿವಕುಮಾರ್** ಕೆಪಿಸಿಸಿ ಅಧ್ಯಕ್ಷ

## ದಿಢೀರ್ ಘೋಷಣೆ

ರಾಜ್ಯ ಕಾಂಗ್ರೆಸ್‌ನಲ್ಲಿ ಮತ್ತೆ ಗುಂಪುಗಾರಿಕೆ ಶುರುವಾಗಲು ರಾಜ್ಯಸಭೆ ಚುನಾವಣೆ ವೇದಿಕೆ ಆಗಬಾರದು ಎಂಬ ಲೆಕ್ಕಾಚಾರದಲ್ಲಿ ಖರ್ಗೆ ಆಯ್ಕೆಯನ್ನು ಎಐಸಿಸಿ ವರಿಷ್ಠರು ದಿಢೀರ್ ಘೋಷಣೆ ಮಾಡಿದರು ಎನ್ನಲಾಗಿದೆ. ಈ ಮಧ್ಯೆ, ಶುಕ್ರವಾರ ಮಧ್ಯಾಹ್ನ ಸಭೆ ಸೇರಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಕಾಂಗ್ರೆಸ್ ಸಂದೇಶ ಆಧರಿಸಿ ದೇವೇಗೌಡರನ್ನು ರಾಜ್ಯಸಭೆ ಅಭ್ಯರ್ಥಿಯಾಗಿ ಕಣಕ್ಕಿಳಿಸಲು ನಿರ್ಧರಿಸಿದೆ. 2ನೇ ಬಾರಿಗೆ ಅವಕಾಶ ವಂಚಿತರಾಗಿರುವ ಮುದ್ದಹನುಮೇಗೌಡ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡುವ ಅಥವಾ ಕೆಪಿಸಿಸಿ ಹಿರಿಯ ಉಪಾಧ್ಯಕ್ಷರಾಗಿ ನೇಮಕ ಮಾಡುವ ಸಾಧ್ಯತೆಗಳಿವೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಬಿಜೆಪಿಯ ಪ್ರಭಾಕರ ಕೋರೆ, ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ಪ್ರೊ. ರಾಜೀವ್ ಗೌಡ ಹಾಗೂ ಜೆಡಿಎಸ್‌ನ ಕುಪೇಂದ್ರ ರೆಡ್ಡಿ ನಿವೃತ್ತಿಯಿಂದ ತೆರವಾಗಿರುವ ನಾಲ್ಕು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ವಿಧಾನಸಭೆ ಸಂಖ್ಯಾಬಲ ಆಧಾರದಲ್ಲಿ ಬಿಜೆಪಿಗೆ 2 ಹಾಗೂ ಪ್ರತಿಪಕ್ಷ ಪಾಳಯಕ್ಕೆ 2 ಸ್ಥಾನಗಳು ಸಿಗುವುದು ಖಾತರಿಯಾಗಿದೆ.